ಸಮತೆಯೆಡೆಗೆ ನಮ್ಮ ನಡಿಗೆ

ಕರ್ನಾಟಕ ರಾಜ್ಯ

# ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಉಡುಪಿ

## ಸೊಲ್ಮೆಲು ಸಿರಿಯ ನಾಡಿಗೆ ಮೈತ್ರಿಯೆಡೆಗೆ ನಮ್ಮ ನಡಿಗೆ

**ಮಾರ್ಚ್ 8,9 2024 - ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ 'ಮಹಿಳಾ ಚೈತನ್ಯ ದಿನ'**

'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ವು ಜನಪರ, ಮಹಿಳಾ ಪರ ಸಂಘಟನೆಗಳ ಜಾಲವಾಗಿದ್ದು ಕಳೆದ ಹನ್ನೆರೆಡು ವರ್ಷಗಳಿಂದ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಜಾಥಾ, ಸಮಾವೇಶ, ಜಾಗೃತಿ ಕಾರ್ಯಕ್ರಮ ನಡೆಸುವುದರೊಂದಿಗೆ ಜನಪರ ಹೋರಾಟಗಳಲ್ಲಿ ಸಹಭಾಗಿತ್ವ ನೀಡುತ್ತ ಬಂದಿದೆ. ಕರ್ನಾಟಕದಾದ್ಯಂತ ಮಹಿಳಾ ಚಳವಳಿ, ಸಾಹಿತ್ಯ, ಶಿಕ್ಷಣ ಕ್ಷೇತ್ರದ ಪರಿಣಿತರು,ರಂಗಭೂಮಿ,ಜನಪದ ಹೋರಾಟಗಳಲ್ಲಿ ಸಕ್ರಿಯವಾಗಿರುವ ಅನೇಕ ವ್ಯಕ್ತಿ-ಸಂಘಟನೆಗಳು ಈ ಒಕ್ಕೂಟದೊಂದಿಗಿದ್ದಾರೆ. ಮಹಿಳಾ ಸಂಘಟನೆಗಳು, ದಲಿತ ದಮನಿತರ ಸಂಘಟನೆಗಳು, ಅಂಗನವಾಡಿ, ಪೌರಕಾರ್ಮಿಕರು, ಬಿಸಿಯೂಟ ನೌಕರರು, ಆಶಾ ಕಾರ್ಯಕರ್ತೆಯರು-ಮನೆಕೆಲಸದ ಕಾರ್ಮಿಕರು, ಗಾರ್ಮೆಂಟ್ ಮತ್ತು ಇನ್ನಿತರ ಕಾರ್ಮಿಕರ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು, ಲೈಂಗಿಕ ಕಾರ್ಯಕರ್ತರು, ಲಿಂಗತ್ವ ಅಲ್ಪಸಂಖ್ಯಾತರ ಗುಂಪುಗಳು, ಲೇಖಕಿಯರ ಸಂಘ, ರಂಗಕರ್ಮಿಗಳು, ಅಕಾಡೆಮಿಕ್ ವಲಯದ ಸಮಾನ ಮನಸ್ಕರು ಮೊದಲಾಗಿ ನೂರಾರು ಸಂಘ-ಸಂಸ್ಥೆ-ಸಂಘಟನೆಗಳು ಒಕ್ಕೂಟದಲ್ಲಿ ಭಾಗಿಯಾಗಿವೆ. ಜೀವಪರ ಚಿಂತನೆ ಇರುವ, ಸಮಾನತೆಯ ಆಶಯ ಹೊಂದಿದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ವಿಶ್ವಾಸ ಹೊಂದಿದ, ಸರ್ವಧರ್ಮ ಸಮಭಾವ ಇರುವ ಯಾರು ಬೇಕಾದರೂ ಒಕ್ಕೂಟದಲ್ಲಿ ಭಾಗಿಯಾಗಬಹುದು.

2012 ರಲ್ಲಿ ಮಂಗಳೂರಿನಲ್ಲಿ ಹೋಂಸ್ಟೇ ದಾಳಿ ಪ್ರಕರಣ ಮತ್ತು ದೆಹಲಿಯಲ್ಲಿ ನಡೆದ ನಿರ್ಭಯಾ ಅತ್ಯಾಚಾರ ಪ್ರಕರಣಗಳು ದೇಶಾದ್ಯಂತ ಪ್ರತಿಭಟನೆ ಭುಗಿಲೇಳಲು ಕಾರಣವಾದವು. ಆ ವೇಳೆಯಲ್ಲಿ 'ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ' ಮಂಗಳೂರಿನಲ್ಲಿ ರಚನೆಯಾಯಿತು. ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಹಿಂಸೆ, ಲಿಂಗತಾರತಮ್ಯ, ಅಸಮಾನತೆಗಳನ್ನು 'ಇನ್ನು ಸಾಕು' ಎಂಬ ಘೋಷವಾಕ್ಯವನ್ನಿಟ್ಟು ಕೊಂಡು ಮಂಗಳೂರಿನಲ್ಲಿ 2013 ರಲ್ಲಿ ಮೊದಲ ಸಾರ್ವಜನಿಕ ಸಮಾವೇಶ ನಡೆಸಿತು. ಸಮಾವೇಶದ ಬಳಿಕ ರಾಜ್ಯದಾದ್ಯಂತ ಇರುವ ಮಹಿಳಾಪರ ಸಂಘಟನೆಗಳು ಒಗ್ಗೂಡಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ನಿರ್ಮಾಣವಾಯಿತು. ಅಲ್ಲಿಂದ ಪ್ರತಿವರ್ಷ ಒಂದೊಂದು ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು 'ಮಹಿಳಾ ಚೈತನ್ಯ ದಿನ'ವಾಗಿ ಆಚರಿಸುತ್ತಾ, ಮಹಿಳಾ ಜಾಗೃತಿ ಸಮಾವೇಶವನ್ನು ನಡೆಸಲಾಗುತ್ತಿದೆ. ಇದುವರೆಗೆ ಮಂಗಳೂರು, ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳ, ಶಿವಮೊಗ್ಗ, ಧಾರವಾಡ, ಮಂಡ್ಯ, ಕೋಲಾರ, ಕಲಬುರಗಿ, ತುಮಕೂರುಗಳಲ್ಲಿ ಹನ್ನೊಂದು ಸಮಾವೇಶಗಳನ್ನು ನಡೆಸಲಾಗಿದೆ. 2024ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮಗಳನ್ನು ಉಡುಪಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

### ನಮ್ಮ ನಡಿಗೆ ಸಮತೆಯೆಡೆಗೆ :

ಲಾಭ ದೋಚುವ ಉದಾರವಾದ ಆರ್ಥಿಕತೆಯೊಂದಿಗೆ ರಾಜಕಾರಣ-ಧರ್ಮ-ಜಾತಿವ್ಯವಸ್ಥೆಯೂ ಕೈಜೋಡಿಸಿರುವುದರ ಪರಿಣಾಮವಾಗಿ, ಮಹಿಳೆಯರ ಮೇಲಿನ ಹಿಂಸೆಯ ಸ್ವರೂಪಗಳು ಹೆಚ್ಚೆಚ್ಚು ಸಂಕೀರ್ಣಗೊಳ್ಳುತ್ತಿರುವುದಷ್ಟೇ ಅಲ್ಲ, ಮಾಮೂಲಿ ವಿಷಯವಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ, ಅನೈತಿಕ ಪೊಲೀಸ್‌ಗಿರಿ, ಮರ್ಯಾದಾಹೀನ ಹತ್ಯೆ, ಜಾತಿ ಪಂಚಾಯ್ತಿಗಳ ಮೂಲಕ ಮಹಿಳೆಯರು ಧರ್ಮ/ಕೋಮು/ಜಾತಿ ವೈಷಮ್ಯಗಳಿಗೆ ದಾಳವಾಗಿ ಬಳಕೆಯಾಗುತ್ತಿದ್ದಾರೆ. ಲಿಂಗತ್ವ ಮತ್ತು ಲೈಂಗಿಕತೆ ಕುರಿತು ವೈಜ್ಞಾನಿಕ ಮನೋಭಾವ ಬೆಳೆಸುವ ಆರೋಗ್ಯಕರ ಶಿಕ್ಷಣದ ಕೊರತೆ, ಹೆಣ್ಣುಮಕ್ಕಳನ್ನು ಸಹಜೀವಿಯಾಗಿ ನೋಡದೆ ಸರಕಿನಂತೆ ನೋಡುವ ಪಿತೃಸಂಸ್ಕೃತಿ ಮತ್ತು ಮಾರುಕಟ್ಟೆ ಆರ್ಥಿಕತೆಗಳು ಮಹಿಳಾ ತಾರತಮ್ಯ ಮತ್ತು ದೌರ್ಜನ್ಯಗಳನ್ನು ಇಮ್ಮಡಿಗೊಳಿಸಿವೆ. ಸ್ತ್ರೀ ಭ್ರೂಣ ಹತ್ಯೆ, ಅತ್ಯಾಚಾರ, ದೌರ್ಜನ್ಯಗಳು ಎಗ್ಗಿಲ್ಲದೆ ಸಂಭವಿಸುತ್ತಿವೆ. ಅಧಿಕಾರ ರಾಜಕಾರಣದಲ್ಲಿ ತೊಡಗಿರುವ ಪಕ್ಷ/ಸಿದ್ಧಾಂತಗಳು ಲಿಂಗ ಸಮಾನತೆಯನ್ನು ಚುನಾವಣಾ ಪ್ರಣಾಳಿಕೆಗಳಿಗಷ್ಟೇ ಸೀಮಿತಗೊಳಿಸಿ ರಾಜಕೀಯ ಪ್ರಾತಿನಿಧ್ಯ ಒದಗಿಸಬೇಕಾದ ಸಂದರ್ಭದಲ್ಲಿ ಎಲ್ಲ ಸ್ತರದ ಮಹಿಳೆಯರಿಗೂ ತೊಡರುಗಾಲು ಹಾಕುತ್ತಿವೆ.ಹೀಗೆ ಲಾಭಕೋರ ಆರ್ಥಿಕತೆ, ಜಾತೀಯತೆ, ಪುರುಷ ಪ್ರಾಧಾನ್ಯತೆ, ಮತಾಂಧತೆ ಮತ್ತು ಇವುಗಳಿಗೆ ಪೂರಕವಾಗಿರುವ ಅಧಿಕಾರ ರಾಜಕಾರಣವು ವಿಕೃತ ಹಿಂಸೆಯನ್ನು ಹುಟ್ಟು ಹಾಕುತ್ತಿವೆ. ಅದಕ್ಕೆ ಬಲಿಯಾಗುವವರು ಮಹಿಳೆಯರೇ ಆಗಿದ್ದಾರೆ. ಹಿಂಸೆಯನ್ನು ಇಲ್ಲವಾಗಿಸಲು, ಸಮಸಮಾಜ ಕಟ್ಟಲು ಬದ್ಧರಾಗಿರುವವರೆಲ್ಲ ಸಂಘಟಿತರಾಗಬೇಕಾದ ತುರ್ತು ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಇದು ಒಕ್ಕೂಟದ ಪ್ರಮುಖ ಆಶಯವೂ ಆಗಿದೆ. ಅಂತೆಯೇ 'ಸಮತೆಯೆಡೆಗೆ ನಮ್ಮ ನಡಿಗೆ' ನಮ್ಮ ಧ್ಯೇಯ ವಾಕ್ಯವಾಗಿದೆ.

ಭಾರತದ ಮಹಿಳೆಯರು ತಮ್ಮ ಕುಟುಂಬಗಳ ಜೊತೆಜೊತೆಗೆ ದೇಶಕಟ್ಟುವ ಕೆಲಸದಲ್ಲೂ ಸಕ್ರಿಯವಾಗಿ ತೊಡಗಿದವರು. ಸ್ವಾತಂತ್ರ್ಯ ಬರುವುದಕ್ಕೆ ಮೊದಲಿನಿಂದಲೂ ಸಾವಿತ್ರಿಬಾಯಿ ಫುಲೆಯವರಂತಹ ಹತ್ತಾರು ಧೀಮಂತೆಯರು ರಚನಾತ್ಮಕ ಸಮಾಜ ನಿರ್ಮಾಣಕ್ಕಾಗಿ ತಮ್ಮನ್ನು ತಾವು ತೆತ್ತುಕೊಂಡಿದ್ದಾರೆ. ಸ್ವಾತಂತ್ರ್ಯ ಚಳವಳಿಯಲ್ಲೂ ಜಾತಿ, ಮತ, ಧರ್ಮ, ಭಾಷೆಗಳ ಹಂಗು ತೊರೆದ ಭಾರತೀಯ ಮಹಿಳೆಯರು ಆಂದೋಲನಕ್ಕೆ ಶಕ್ತಿ ತುಂಬಿದ್ದಾರೆ.

ಸ್ವಾತಂತ್ರ್ಯ ಆಂದೋಲನ ಮತ್ತು ಸಂವಿಧಾನದ ಆಶಯಗಳಿಗೆ ತಕ್ಕಂತೆ ಈ ದೇಶವನ್ನು ಕಟ್ಟಿ, ಬೆಳೆಸುವುದಕ್ಕೆ ನಾವು ಈಗಲೂ ಬದ್ಧರಾಗಿದ್ದೇವೆ. ವಿಶ್ವ ಸಹೋದರಿತ್ವದ ಪರಿಕಲ್ಪನೆಯನ್ನು ನಂಬುವ ಮಹಿಳಾ ಚಳವಳಿಯು ಮತ-ಧರ್ಮಗಳ ಆಧಾರದಲ್ಲಿ ಸಮಾಜ ಒಡೆಯುವುದನ್ನು ಖಂಡಿಸುತ್ತದೆ. ಸರ್ವರ ಸಮಾನತೆ, ಏಳಿಗೆಯನ್ನು ಸಾಧಿಸ ಬಯಸುವ ಸಂವಿಧಾನದಲ್ಲಿ ನಂಬಿಕೆ ಇರಿಸಿರುವವರೆಲ್ಲರೂ ಸರ್ವಜನಾಂಗದ ಶಾಂತಿಯ ತೋಟವಾದ ಭಾರತದ ಪ್ರಜೆಗಳು ಎಂಬುದು ನಮ್ಮ ಅಚಲ ನಂಬಿಕೆಯಾಗಿದೆ.

ಇಂಥ ಆಶಯಗಳನ್ನು ಹೊತ್ತು ಒಕ್ಕೂಟವು ಈ ಬಾರಿ ಉಡುಪಿ ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲು ಮುಂದಾಗಿದೆ. ಇದಕ್ಕೆ ಪೂರ್ವಭಾವಿಯಾಗಿ 'ಅರಿವಿನ ಪಯಣ' ಎಂಬ ಲಿಂಗಸೂಕ್ಷ್ಮತೆ ಬೆಳೆಸುವ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಮಹಿಳೆಯರ ಮೇಲಿನ ಹಿಂಸೆಯನ್ನು ಪ್ರತಿಭಟಿಸುವ 'ವಿಮೆನ್ ಇನ್ ಬ್ಲಾಕ್' ಎಂಬ ಮೌನಜಾಗೃತಿ ಕಾರ್ಯಕ್ರಮವನ್ನು 'ನಮ್ಮ ಉಡುಪು ನಮ್ಮ ಹಕ್ಕು' ಎಂಬ ಘೋಷವಾಕ್ಯದೊಂದಿಗೆ ಎಲ್ಲಾ ತಾಲೂಕುಗಳಲ್ಲೂ ಹಮ್ಮಿಕೊಳ್ಳಲು ಯೋಜಿಸಲಾಗಿದೆ. ಇದರಲ್ಲಿ ಜಿಲ್ಲೆಯ ಪ್ರಗತಿಪರ ಸಂಘಟನೆಗಳು ಹಾಗೂ ಸಮಾನ ಮನಸ್ಕ ಸಹೋದರಿ-ಸಹೋದರರು ಜೊತೆಗೂಡಲಿದ್ದಾರೆ.

## ಉಡುಪಿಯ ಪರಿಚಯ :

ತುಳುವಿನಲ್ಲಿ ಒಡಿಪು ಕನ್ನಡದಲ್ಲಿ ಉಡುಪಿ ನವಾಯತಿಯಲ್ಲಿ ವಡ್ಪ ಎಂಬ ಹೆಸರುಳ್ಳ ಜಿಲ್ಲೆಯು 'ಸಿರಿ ದೈವ'ದ ಸೀಮೆ. ಜನಪದ ಐತಿಹ್ಯಗಳ ಅನುಸಾರ ಸಿರಿ ಗಂಧಲೇಪಿತ ಅಡಿಕೆ ಹೂಗಳಿಂದ ಹುಟ್ಟಿದವಳು-ನಿಸರ್ಗದ ಮಗಳು. ಊಳಿಗಮಾನ್ಯ ಕುಟುಂಬದ ಗಂಡಾಳ್ವಿಕೆಯನ್ನು ಧಿಕ್ಕರಿಸಿ, ಕಷ್ಟಕಾರ್ಪಣ್ಯಗಳ ಬದುಕನ್ನುಂಡು ತನ್ನ ಮಕ್ಕಳನ್ನು ಬೆಳೆಸಿದ ಧೀಮಂತ ಮಹಿಳೆ. ಉಡುಪಿ ಜಿಲ್ಲೆಯಲ್ಲಿ ಇಂದಿಗೂ 'ಸಿರಿ ಜಾತ್ರೆ' ಆಚರಿಸುವ ಮೂಲಕ ಜನ ಆಕೆಯ ನೆನಪನ್ನು ಕಾಪಿಟ್ಟುಕೊಂಡಿರುವರು. ಆಧುನಿಕ ಉಡುಪಿ ಜಿಲ್ಲೆಯಲ್ಲೂ ಮಹಿಳೆಯರ ಜನಸಂಖ್ಯೆಯು ಒಟ್ಟು ಜನಸಂಖ್ಯೆಯ ಶೇ.50ರಷ್ಟು ಇದೆ. ಪ್ರತಿ ಸಾವಿರ ಗಂಡಸರಿಗೆ1094 ಮಹಿಳೆಯರನ್ನುಳ್ಳ ಉಡುಪಿ ಜಿಲ್ಲೆಯು ಲಿಂಗಾನುಪಾತದ ಅನುಸಾರ ಕರ್ನಾಟಕ ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿ ಇದೆ. ಮಹಿಳಾ ಸಾಕ್ಷರತೆಯೂ ಶೇ.81.5ರಷ್ಟಿದ್ದು ರಾಜ್ಯದಲ್ಲಿ ಉನ್ನತ ಸ್ಥಾನ ಹೊಂದಿದೆ. ಉಡುಪಿ ಜಿಲ್ಲೆಯಲ್ಲಿ ರೂಪ ಪಡೆದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರ ದೊಡ್ಡ ಪಟ್ಟಿಯಲ್ಲಿ ಉಮಾಬಾಯಿ ಕುಂದಾಪುರ, ಗಿರಿಜಾಬಾಯಿ, ಅಂಬಾ ಬಾಯಿ, ಮನೋರಮ ಬಾಯಿಯವರು ಮುಂಚೂಣಿ ಸಾಲಿನಲ್ಲಿ ಇದ್ದವರು. ಉಡುಪಿಯ ವೈವಿಧ್ಯವು ಹಲವು ಬಗೆಯದು: ಕಾಲುಭಾಗಕ್ಕಿಂತ ಹೆಚ್ಚು ಪಶ್ಚಿಮ ಘಟ್ಟದ ದಟ್ಟ ಹಸಿರು ಕಾಡುಗಳನ್ನು ಹೊಂದಿರುವ ಉಡುಪಿ ಜಿಲ್ಲೆಯಲ್ಲಿ ಹಲವು ಬಗೆಯ ತುಳು, ಕನ್ನಡ, ಕೊಂಕಣಿಗಳು, ಬ್ಯಾರಿ, ಉರ್ದು, ಕೊರಗ ಭಾಷಿಕರಿದ್ದಾರೆ; ಹಿಂದು, ಮುಸಲ್ಮಾನ, ಕ್ರಿಶ್ಚಿಯನ್, ಜೈನ, ಬೌದ್ಧ ಮತಸ್ಥರಿದ್ದಾರೆ; ಶತಮಾನಗಳಷ್ಟು ಪುರಾತನವಾದ ದೇವಸ್ಥಾನ, ಚರ್ಚು, ಮಸೀದಿ, ದರ್ಗಾ, ಬಸದಿ, ದೈವಸ್ಥಾನಗಳು ಇವೆ; ಹಿಂದು ದೇವಾಲಯಗಳಿಗೆ ಪೂಜಾ ಪರಿಕರಗಳನ್ನು ತಯಾರಿಸಿ ಕೊಡುವ ಮುಸಲ್ಮಾನ ಕುಶಲ ಕರ್ಮಿಗಳಿದ್ದಾರೆ, ಎಲ್ಲಾ ಬಗೆಯ ಮತಸ್ಥರೂ ಕೂಡಿ ಆಚರಿಸುವ ಚರ್ಚಿನ ಉತ್ಸವಗಳಿವೆ; ಎಲ್ಲರಿಗೂ ಆಧುನಿಕ ಶಿಕ್ಷಣ, ಆಸ್ಪತ್ರೆಗಳನ್ನು ಒದಗಿಸಿಕೊಟ್ಟ ಕ್ರಿಶ್ಚಿಯನ್ ಸಂಸ್ಥೆಗಳಿವೆ; ಅಡಕೆ, ಭತ್ತ, ಗೇರು ಬೀಜದ ಕೃಷಿಯಲ್ಲೂ, ಮೀನುಗಾರಿಕೆಯಲ್ಲೂ, ಬೀಡಿ ಹೆಂಚು ಉದ್ಯಮಗಳಲ್ಲೂ ಎಲ್ಲ ಜಾತಿ ಮತಗಳ ಜನ ಸಾಮುದಾಯಿಕವಾಗಿ ತೊಡಗಿಕೊಂಡಿದ್ದಾರೆ; ಐದು ನದಿಗಳ ಸಂಗಮವಾದ ಪಂಚಗಂಗ, ಐದು ನದಿಗಳ ಸಮುದ್ರ ಮಿಲನ ಕೋಡಿಗಳು ಹೇಗೆ ಉಡುಪಿ ಜಿಲ್ಲೆ ವೈವಿಧ್ಯ ನಿಸರ್ಗ ಸಂಗಮಕ್ಕೆ ಪ್ರತಿಮೆಯೋ ಹಾಗೆಯೇ, ವಿಶಿಷ್ಟ ಹೂವಿನ ತಳಿಯಾಗಿ ಜಾಗತಿಕ ದಾಖಲೆ ಪಡೆದಿರುವ ಶಂಕರಪುರ ಮಲ್ಲಿಗೆ ದಂಡೆ ಜಾತಿ ಮತಗಳನ್ನು ಮೀರಿದ ಶ್ರಮ ಸಂಗಮದ ಪ್ರತಿಮೆಯಾಗಿದೆ; ಸ್ವಾತಂತ್ರ್ಯ ಹೋರಾಟಗಾರರಾಗಿ ಸೆರೆ ಸೇರಿ, ಅಲ್ಲಿ ಯಕ್ಷಗಾನ ಕಲೆ ಕಲೆತು, ಕರಾವಳಿಯ ಪ್ರಖ್ಯಾತ ಯಕ್ಷಗಾನ ಅರ್ಥಧಾರಿಗಳಾದ ಮಲ್ಪೆ ಶಂಕರನಾರಾಯಣ ಸಾಮಗರನ್ನು ಯಕ್ಷರಂಗದ ಗಾಂಧಿ ಎನ್ನುತ್ತಿದ್ದರು, ಅವರು 'ಕ್ರಿಸ್ತನ ಕರುಣೆ' ಎಂಬ ಪ್ರಸಂಗವನ್ನು ಕಟ್ಟಿ ಖ್ಯಾತಿಗೊಳಿಸಿದ್ದರು; ಕೊಡುಗೈದಾನಿ ಹಾಜಿ ಅಬ್ದುಲ್ಲ ಅವರು ಮತ ಭೇದವೆಣಿಸದೆ ಸಾರ್ವಜನಿಕ ಹಿತಕ್ಕಾಗಿ ಬ್ಯಾಂಕು, ಆಸ್ಪತ್ರೆಗಳನ್ನು ಸ್ಥಾಪಿಸಿದವರು, ಎಲ್ಲಮತಗಳ ಆಚರಣೆಗೆ ನೆರವು ಒದಗಿಸುತ್ತಿದ್ದವರೂ ಆಗಿದ್ದರು- ಈಬಗೆಗಳಲ್ಲಿ ಉಡುಪಿಯ ನೆಲವು ಸಾಮಾಜಿಕ ಅರಿವಿನ ರುಜುವಾಗಿ ಬೆಳಗಿದೆ. ನಿಸರ್ಗ, ಜಾನಪದ, ಸಾಮಾಜಿಕ ಬದುಕು, ಸಾಂಸ್ಕೃತಿಕ ಆಚರಣೆಗಳ ವೈವಿಧ್ಯತೆಯಲ್ಲಿ ಕಟ್ಟಿಕೊಂಡ ಜೀವನಕ್ರಮದಲ್ಲಿ ಸಹಬಾಳ್ವೆಯ ಜೀವಧಾತುವಾದ ಮೈತ್ರಿಯು ಸಹಜವಾಗಿ ಇದೆ. ಅದಕ್ಕಾಗಿಯೇ ನಾವು **ಸೊಲ್ಮೆಲು ಸಿರಿಯ ನಾಡಿಗೆ ಮೈತ್ರಿಯೆಡೆಗೆ** ನಮ್ಮ ನಡಿಗೆ ಎಂಬ ಘೋಷವಾಕ್ಯವನ್ನು ಒತ್ತಿ ಎತ್ತಿದ ದನಿಯಲ್ಲಿ ಹೇಳಬೇಕಾಗಿದೆ.

ಇಂಥಲ್ಲಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2024ರಲ್ಲಿ ಸಮಾನ ಮನಸ್ಕ ಸಂಘಟನೆ, ಸಂಸ್ಥೆ, ವ್ಯಕ್ತಿಗಳೊಡಗೂಡಿ ಮಹಿಳಾ ಸಮಾನತೆಗಾಗಿ ಅರಿವಿನ ಪಯಣ ಮತ್ತು ಸಮಾವೇಶ ನಡೆಸುತ್ತಿರುವುದು ಚಾರಿತ್ರಿಕ ಮೈಲುಗಲ್ಲಾಗಿದೆ. ಕರ್ನಾಟಕದ ಮೂಲೆಮೂಲೆಗಳಿಂದ ಎಲ್ಲ ಸಹೋದರಿಯರನ್ನು, ಮಾನವೀಯ ಮನಸ್ಸುಗಳನ್ನು ಸ್ವಾಗತಿಸಲು ಉಡುಪಿಯು ಸಜ್ಜಾಗಿದೆ.

## ನಮ್ಮ ಹಕ್ಕೊತ್ತಾಯಗಳು :

- ಸಾಂವಿಧಾನಿಕ ಮೌಲ್ಯಗಳು ಸ್ಥಾಪಿತಗೊಂಡು ಜೊತೆಗೂಡಿ ಬಾಳುವ ಸೆಕ್ಯುಲರ್ ಭಾರತ ಬಲಗೊಳ್ಳಬೇಕು.
- ಜಾತಿ, ವರ್ಗ, ಮತ, ಧರ್ಮ, ಜನಾಂಗ, ಯುದ್ಧ, ಸಿದ್ಧಾಂತ, ಭಾಗಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುವ ಭೀಕರ ಹಿಂಸೆ, ಅತ್ಯಾಚಾರಗಳು ನಿಲ್ಲಬೇಕು.
- ಸರ್ಕಾರ ರಚನೆ ಮತ್ತು ರಾಜಕೀಯರಂಗವೂ ಸೇರಿದಂತೆ ಎಲ್ಲ ರಂಗಗಳಲ್ಲಿ, ಸಂಘ-ಸಂಸ್ಥೆಗಳಲ್ಲಿ ಸಾಮಾಜಿಕ ನ್ಯಾಯವನ್ನು ಆಧರಿಸಿದ ಮಹಿಳಾ ಮೀಸಲಾತಿ ಕಡ್ಡಾಯವಾಗಿ ಜಾರಿಯಾಗಬೇಕು. ಅರ್ಥಪೂರ್ಣ ಮಹಿಳಾ ನಾಯಕತ್ವ ಬೆಳೆಸಲು ಅವಕಾಶ ಮಾಡಿಕೊಡಬೇಕು.

- ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆಯನ್ನು ಕಠಿಣ ಕ್ರಮಗಳ ಮೂಲಕ, ಜನಜಾಗೃತಿಯ ಮೂಲಕ ತಡೆಯಲೇಬೇಕು. ಹೆಣ್ಣು ಭ್ರೂಣಹತ್ಯೆ, ಆ್ಯಸಿಡ್ ದಾಳಿ, ಅತ್ಯಾಚಾರ, ಬಾಲ್ಯವಿವಾಹ, ಮರ್ಯಾದೆಗೇಡು ಹತ್ಯೆ, ವರದಕ್ಷಿಣೆ ಹಿಂಸೆ, ಕೌಟುಂಬಿಕ ದೌರ್ಜನ್ಯ ಮೊದಲಾದ ಲಿಂಗ ಸಂಬಂಧ ದೌರ್ಜನ್ಯಗಳು ಕೊನೆಯಾಗಬೇಕು. ಸಾರ್ವಜನಿಕ ಸ್ಥಳ/ಸಂಸ್ಥೆಗಳಲ್ಲಿ, ವಿವಾಹ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಸಹಜೀವಿಯಾಗಿ, ಸಮಾನವಾಗಿ, ಗೌರವಯುತವಾಗಿ ಕಾಣುವಂತಹ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು.
- ಮಹಿಳೆಯರ ಮನೆವಾರ್ತೆಯ ಜವಾಬ್ದಾರಿ ನಿಭಾಯಿಸುವಿಕೆಯು ಉದ್ಯೋಗವೆಂದು ಪರಿಗಣಿಸಲ್ಪಡಬೇಕು ಮತ್ತು ದೇಶದ ಒಟ್ಟು ಉತ್ಪಾದನೆಯಲ್ಲಿ ಗೃಹಕೃತ್ಯದ ಪ್ರಾಮುಖ್ಯತೆಯನ್ನು ತಿಳಿಸುವ ಜಾಗೃತಿ ನಡೆಯಬೇಕು.
- ಅಶ್ಲೀಲ ಸಾಹಿತ್ಯ, ಸಿನಿಮಾ, ಜಾಲತಾಣಗಳನ್ನು ನಿಷೇಧಿಸಬೇಕು.
- 12 ರಿಂದ 18 ವರ್ಷದವರೆಗಿನ ಹೆಣ್ಣುಮಕ್ಕಳಿಗೆ ಉಚಿತ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು. ಆರೋಗ್ಯಕರ ಲೈಂಗಿಕ ಶಿಕ್ಷಣ ಜಾರಿ ಆಗಬೇಕು. ಲಿಂಗಸಮಾನತೆ ದೃಷ್ಟಿಕೋನದ ಪಠ್ಯಗಳು ಎಲ್ಲೆಡೆ ರಚನೆಯಾಗಬೇಕು.
- ಪೋಕ್ಸೋ ಕಾಯಿದೆ ಬಲಪಡಿಸಬೇಕು. ಮಹಿಳೆ ಮತ್ತು ಮಕ್ಕಳ ಸಾಗಾಟ ತಡೆಗೆ ಕ್ರಮ ಕೈಗೊಳ್ಳಬೇಕು. ಪ್ರತಿ ಜಿಲ್ಲೆಯಲ್ಲಿ ಅತ್ಯಾಚಾರ ತಡೆ ಕಾವಲು ಸಮಿತಿ ರಚನೆಯಾಗಬೇಕು.
- ತ್ವರಿತ ನ್ಯಾಯಾಲಯಗಳ ಸ್ಥಾಪನೆಯಾಗಿ ಶೀಘ್ರ ನ್ಯಾಯ ದೊರೆಯುವಂತಾಗಬೇಕು.
- ಮುಟ್ಟೇ ಮೊದಲಾದ ರೂಢಿ, ಆಚರಣೆಗಳ ಹೆಸರಿನಲ್ಲಿ ಮಹಿಳೆಯರನ್ನು ಅಗೌರವಿಸುವ, ಹೊರಗಿಡುವ ಶೋಷಿಸುವಂತಹ ಮೌಢ್ಯಾಚರಣೆಗಳ ತಡೆಗಾಗಿ ಜಾಮೀನುರಹಿತ ಕಾಯಿದೆ ರಚನೆಯಾಗಬೇಕು.
- ಜೆಂಡರ್ ಬಜೆಟ್ ಕಡ್ಡಾಯವಾಗಿ ಜಾರಿಗೊಳಿಸಿ, ಯೋಜನಾ ಹಣದ ಬಳಕೆಗೆ ಕಾವಲು ಸಮಿತಿ ರಚಿಸಬೇಕು.
- ಲಿಂಗತ್ವ ಅಲ್ಪಸಂಖ್ಯಾತರ, ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಅಪರಾಧೀಕರಣ ತಡೆಯಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕ ಮತ್ತು ನೀತಿ ನಿರೂಪಣಾ ಸ್ಥಾನಗಳಲ್ಲಿ ಅವರ ಪ್ರಾತಿನಿಧ್ಯ ಕಡ್ಡಾಯಗೊಳಿಸಬೇಕು.
- ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆಯರ ಉದ್ಯೋಗ ಖಾಯಂಗೊಳಿಸಬೇಕು. ಗಾರ್ಮೆಂಟ್ಸ್ ನೌಕರರು, ಮನೆಗೆಲಸದವರು, ಕಟ್ಟಡ ಕಾರ್ಮಿಕರು ಹಾಗೂ ಇನ್ನಿತರ ಎಲ್ಲ ಅಸಂಘಟಿತ ವಲಯದ ದುಡಿಮೆಗಾರರಿಗೆ ದುಡಿಮೆಗಾರರಿಗೆ ಬದುಕುವ ವೇತನ, ಲೈಂಗಿಕ ಕಿರುಕುಳ ಮುಕ್ತ ಆರೋಗ್ಯಕರ ಕೆಲಸದ ವಾತಾವರಣ ಸಿಗಲೇಬೇಕು. ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ನೀಡಬೇಕು.
- ಉದ್ಯೋಗ ಪ್ರತಿ ಪ್ರಜೆಯ ಹಕ್ಕು. ಸಾಮರ್ಥ್ಯಕ್ಕೆ ತಕ್ಕ ಉದ್ಯೋಗಾವಕಾಶಗಳು ಗ್ರಾಮೀಣ ಹಾಗೂ ಸಣ್ಣ ಪಟ್ಟಣ ಪ್ರದೇಶಗಳಲ್ಲೂ ರೂಪುಗೊಳ್ಳುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಜನರ ವಲಸೆ ತಡೆಗಟ್ಟಿ ಸ್ಥಳೀಯವಾಗಿಯೇ ಉದ್ಯೋಗದ ಭದ್ರತೆ ಒದಗಿಸಬೇಕು.
- ಯಾವುದೇ ಸ್ವರೂಪದಲ್ಲಿ ಅಸ್ಪ್ರಶ್ಯತೆ ಕೊನೆಗೊಳ್ಳಬೇಕು. ಅಸ್ಪ್ರಶ್ಯತೆಯನ್ನು ತಡೆಯಲು ಪರಿಣಾಮಕಾರಿ, ಪರಿವರ್ತನಕಾರಿ ಕ್ರಮಗಳನ್ನು ಕೈಗೊಳ್ಳಬೇಕು. ಅಸ್ಪ್ರಶ್ಯತಾ ತಡೆ ಕಾಯಿದೆ ಬಲಗೊಳಿಸಿ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು.
- ಪೌರಕಾರ್ಮಿಕರಿಗೆ ಬದುಕುವ ವೇತನ, ಉತ್ತಮ ಕೆಲಸದ ವಾತಾವರಣ, ಸುರಕ್ಷಾ ಸೌಲಭ್ಯಗಳು, ಮ್ಯಾನ್‌ಹೋಲ್ ಮತ್ತು ಮಲದಗುಂಡಿಗಳ ಸ್ವಚ್ಛತೆಯ ಯಾಂತ್ರೀಕರಣ, ಶೌಚಾಲಯ ಮತ್ತು ಒಳಚರಂಡಿ ನಿರ್ಮಾಣ, ನೀರು ಪೂರೈಕೆಗಳನ್ನು ಕಾಲಮಿತಿಯೊಳಗೆ ನಡೆಸಲು ಕ್ರಿಯಾಯೋಜನೆ ರೂಪಿಸಬೇಕು. ಮಲ ಎತ್ತುವಪದ್ಧತಿ ನಿಷೇಧ ಕಾಯ್ದೆಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ಮಲದ ಗುಂಡಿಗಿಳಿದು ಆಗುವ ಸಾವುಗಳನ್ನು ತಡೆಗಟ್ಟಬೇಕು ಮತ್ತು ಕಾನೂನು ಉಲ್ಲಂಘಿಸಿ ಪಿಟ್‌ಗೆ ಇಳಿಸಿದವರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕು.
- ಮದ್ಯವ್ಯಸನ ಮುಕ್ತ ಕರ್ನಾಟಕ ನಮ್ಮ ಆಗ್ರಹ.
- ಕೃಷಿಭೂಮಿಯನ್ನು ರೈತರಿಂದ, ಆದಿವಾಸಿಗಳಿಂದ ಬಲವಂತವಾಗಿ ಕಸಿದು ದಿಕ್ಕೇಡಿಗಳನ್ನಾಗಿಸುವಂತಹ ಅಭಿವೃದ್ಧಿ ಯೋಜನೆಗಳು, ಸುಗ್ರೀವಾಜ್ಞೆಗಳು ಸಾಮಾಜಿಕ ಮರುಪರಿಶೀಲನೆಗೊಳಗಾಗಬೇಕು. ಆದಿವಾಸಿ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅಮಾನವೀಯ ದೌರ್ಜನ್ಯ ಕೊನೆಯಾಗಬೇಕು. ಭೂಸುಧಾರಣೆ ತಿದ್ದುಪಡಿ ಕಾಯಿದೆ ರದ್ದಾಗಬೇಕು.
- ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ನಿಲ್ಲಬೇಕು.
  - ರೈತರು ಬೆಳೆದ ಬೆಳೆಗೆ ಕನಿಷ್ಟ ವೈಜ್ಞಾನಿಕ ಬೆಂಬಲ ಬೆಲೆ ನಿಗದಿಪಡಿಸಿ ಕಾಯಿದೆಯಾಗಿಸಬೇಕು.
  - ಪ್ಲಾಸ್ಟಿಕ್, ಅಣು ಮತ್ತು ವಿಷಕಾರಿ ತ್ಯಾಜ್ಯಗಳಿಂದ ಮುಕ್ತವಾದ ಆರೋಗ್ಯಕರ ಪರಿಸರವನ್ನು ಮುಂದಿನ ಪೀಳಿಗೆಗಾಗಿ ಉಳಿಸಲು ಜಾಗೃತಿ, ಸೂಕ್ತ ಕ್ರಮ ಕೈಗೊಳ್ಳಬೇಕು.

**ಸಹಭಾಗಿ ಸಂಘಟನೆಗಳು :** ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಮಂಗಳೂರು, ಕ.ರಾ.ಮ.ದೌ.ವಿ.ಒಕ್ಕೂಟ-ಮೈಸೂರು, ಕ.ರಾ.ಮ.ದೌ.ವಿ.ಒಕ್ಕೂಟ-ಬೆಂಗಳೂರು;ಕ.ರಾ.ಮ.ದೌ.ವಿ.ಒಕ್ಕೂಟ-ವಿಜಯಪುರ:ಕ.ರಾ.ಮ.ದೌ.ವಿ.ಒಕ್ಕೂಟ-ಕೊಪ್ಪಳ; ಕ.ರಾ.ಮ.ದೌ.ವಿ.ಒಕ್ಕೂಟ-ಶಿವಮೊಗ್ಗ;ಕ.ರಾ.ಮ.ದೌ.ವಿ.ಒಕ್ಕೂಟ-ಧಾರವಾಡ;ಕ.ರಾ.ಮ.ದೌ.ವಿ.ಒಕ್ಕೂಟ-ಮಂಡ್ಯ; ಕ.ರಾ.ಮ.ದೌ.ವಿ.ಒಕ್ಕೂಟ-ಕೋಲಾರ; ಕ.ರಾ.ಮ.ದೌ.ವಿ.ಒಕ್ಕೂಟ-ಕಲಬುರಗಿ;ಕ.ರಾ.ಮ.ದೌ.ವಿ.ಒಕ್ಕೂಟ-ತುಮಕೂರು; ಕ.ರಾ.ಮ.ದೌ.ವಿ.ಒಕ್ಕೂಟ-ಉಡುಪಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಆಲ್ ಇಂಡಿಯಾ ಪ್ರೊಗ್ರೆಸ್ಸಿವ್ ವಿಮೆನ್ಸ್ ಅಸೋಸಿಯೇಷನ್, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಪಿ.ಯು.ಸಿ.ಎಲ್, ಮಹಿಳಾ ಮುನ್ನಡೆ, ಶಕ್ತಿಧಾಮ ಮೈಸೂರು, ಆರ್‌ಎಲ್‌ಎಚ್‌ಪಿ ಮೈಸೂರು, ಧ್ವನಿ ಮಹಿಳಾ ಒಕ್ಕೂಟ, ಮೈಸೂರು; ಕರ್ನಾಟಕ ಪ್ರಾಂತ್ಯ ರೈತ ಸಂಘ, ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಕರ್ನಾಟಕ ದಲಿತ ಮಹಿಳಾ ವೇದಿಕೆ, ಕರ್ನಾಟಕ ಜನಶಕ್ತಿ, ನ್ಯಾಶನಲ್ ಫೆಡರೇಷನ್ ಆಲ್ ಇಂಡಿಯನ್ ವಿಮೆನ್, ಎಸ್.ಎಫ್.ಐ., ಡಿವೈಎಫ್ಐ, ಎಐಟಿಯುಸಿ, ಸಿಐಟಿಯು, ಭಾರತೀಯ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ವಿಮೋಚನಾ ಬೆಂಗಳೂರು, ಗಮನ ಮಹಿಳಾ

ಸಮೂಹ, ಸಿಐಈಡಿಎಸ್, ವಿಮೆನ್ಸ್ ವಾಯ್ಸ್, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಗಾರ್ಮೆಂಟ್ ಅಂಡ್ ಟೆಕ್ಸ್ಟೈಲ್ಸ್ ವರ್ಕರ್ಸ್ ಯೂನಿಯನ್, ಸಾಧನಾ ಮಹಿಳಾ ಗುಂಪು ಬೆಂಗಳೂರು, ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ, ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್, ಸಂಗಮ ಬೆಂಗಳೂರು, ಪರ್ಯಾಯ ಕಾನೂನು ವೇದಿಕೆ, ಫೆಡಿನಾ, ಅನೇಕ ಬೆಂಗಳೂರು, ಒಂದೆಡೆ ಬೆಂಗಳೂರು, ಪಯಣ, ಸ್ವರಾಜ್ ನೆಟ್‌ವರ್ಕ್, ವಿಸ್ತಾರ್, ಸಂಚಲನ ಕರ್ನಾಟಕ, ಸಂವಾದ, ಸ್ಲಂ ಜನಾಂದೋಲನ ಸಮಿತಿ, ಬಿ.ಬಿ.ಎಂ.ಪಿ. ಗುತ್ತಿಗೆ ಪೌರಕಾರ್ಮಿಕರ ಸಂಘಟನೆ, ಎಐಸಿಟಿಯು, ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘ-ದಕ್ಷಿಣ ಕನ್ನಡ, ಮೈಸೂರು ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಕೊಪ್ಪಳ ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಸ್ಪಂದನ ಮಂಡ್ಯ, ಸಖಿ, ಹೊಸಪೇಟೆ, ಕವಿ ಪ್ರಕಾಶನ ಕವಲಕ್ಕಿ, ಲಡಾಯಿ ಪ್ರಕಾಶನ ಗದಗ, ದಲಿತ ಕಲಾ ಮಂಡಳಿ ಗದಗ, ಜಾಗೃತ ಮಹಿಳಾ ಒಕ್ಕೂಟ, ಖಾನಾಪುರ, ಸಬಲ ವಿಜಯಪುರ, ಚೈತನ್ಯ ಮಹಿಳಾ ಕೋ ಆಪರೇಟಿವ್ ಬ್ಯಾಂಕ್ ವಿಜಯಪುರ, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ-ಕರ್ನಾಟಕ, ಗ್ರಾಮೀಣ ಕೂಲಿಕಾರ್ಮಿಕರ ಸಂಘಟನೆ, ರಂಗಬೆಳಕು ತಂಡ ಶಿವಮೊಗ್ಗ, ಅಹರ್ನಿಶಿ ಪ್ರಕಾಶನ ಶಿವಮೊಗ್ಗ, ದಿ ಶಿವಮೊಗ್ಗ ಮಲ್ಟಿ ಪರ್ಪಸ್ ಸೋಶಿಯಲ್ ಸರ್ವಿಸ್ ಸೊಸೈಟಿ, ನಿರಂತರ-ಶಿವಮೊಗ್ಗ, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ-ಶಿವಮೊಗ್ಗ, ಸ್ಪಂದನ (ರಿ) ಸಾಗರ, ಕನ್ನಡ ಮೀಡಿಯಂ ನ್ಯೂಸ್ 247 ಚಾನೆಲ್ ಶಿವಮೊಗ್ಗ.

**ಉಡುಪಿ ಸಂಘಟನೆಗಳು:**1. ದಲಿತ ಸಂಘಟನೆಗಳ ಐಕ್ಯತಾ ಸಮಿತಿ, ಉಡುಪಿ ಜಿಲ್ಲೆ 2. ಉಡುಪಿ ಜಿಲ್ಲಾ ಮುಸ್ಲಿಂ ಒಕ್ಕೂಟ 3. ಕ್ಯಾಥೋಲಿಕ್ ಸಭಾ ಉಡುಪಿ ಪ್ರದೇಶ್ (ರಿ) 4. ಸುಗಮ್ಯ ಜಿಲ್ಲಾ ಮಹಿಳಾ ಒಕ್ಕೂಟ, ಉಡುಪಿ ಜಿಲ್ಲೆ 5. ಜಮಾತ್-ಎ-ಇಸ್ಲಾಮಿ ಹಿಂದ್ ಮಹಿಳಾ ವಿಭಾಗ, ಉಡುಪಿ ಜಿಲ್ಲೆ 6. ಜನವಾದಿ ಮಹಿಳಾ ಸಂಘಟನೆ, ಉಡುಪಿ ಜಿಲ್ಲೆ 7. ಮಾತೃಭೂಮಿ ಟ್ರಸ್ಟ್ (ರಿ), ಬೈಂದೂರು 8. ಉಡುಪಿ ಜಿಲ್ಲಾ ಮಹಿಳಾ ಮಂಡಳಿಗಳ ಒಕ್ಕೂಟ 9. ನಮ್ಮ ಭೂಮಿ 10. ಸಾವಿತ್ರಿ ಜ್ಯೋತಿಬಾ ಫುಲೆ ಮಹಿಳಾ ಸಂಘ, ಬೈಂದೂರು 11. ತಾಲೂಕು ಡಿಎಸ್‌ಎಸ್ ಮಹಿಳಾ ಒಕ್ಕೂಟ ಬೈಂದೂರು ಮತ್ತು ಕುಂದಾಪುರ 12. ಉಡುಪಿ ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಷನ್ 13. ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ, ಉಡುಪಿ ಜಿಲ್ಲೆ (CITU) 14. ಎ ಪಿ ಸಿ ಆರ್ ಉಡುಪಿ 15. ಉಡುಪಿ ಜಿಲ್ಲಾ ಲೇಖಕಿಯರ ವಾಚಕೀಯರ ಸಂಘ 16. ರಥಬೀದಿ ಗೆಳೆಯರು(ರಿ) ಉಡುಪಿ 17. ಮಾರ್ಥ ಮರಿಯಮ್ ವನಿತಾ ಸಮಾಜ (ಅರ್ಥೊಡಕ್ಸ್ ಸಿರಿಯನ್ ವುಮೆನ್ಸ್ ಅಸೋಸಿಯೇಷನ್, ಬ್ರಹ್ಮಾವರ ವಲಯ) 18. ಸಹಬಾಳ್ವೆ ಉಡುಪಿ 19. ಉಡುಪಿ ಜಿಲ್ಲಾ ಮೀನುಗಾರರ ಹಾಗೂ ಮೀನು ಕಾರ್ಮಿಕರ ಸಂಘ(CITU) 20. ಆಶ್ರಯ ಸಮುದಾಯ ಸಂಘಟನೆ (ರಿ) ಉಡುಪಿ-ಲಿಂಗತ್ವ ಅಲ್ಪಸಂಖ್ಯಾತರು 21. ದೀಪಾ ಜ್ಯೋತಿ ನೆಟ್ವರ್ಕ್ ಆಫ್ ಪಾಸಿಟಿವ್ ಪೀಪಲ್ ಉಡುಪಿ. 22. ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಮಿತಿ, ಉಡುಪಿ ಜಿಲ್ಲೆ 23. ಸಾಂಗತ್ಯ, ನಕ್ರೆ, ಕಾರ್ಕಳ 24. ಸಾಸ್ತಾನ ಮಹಿಳಾ ಮಂಡಳ (ರಿ), ಪಾಂಡೇಶ್ವರ, ಸಾಸ್ತಾನ 25. ಭಾರತೀಯ ಕ್ರೈಸ್ತ ಒಕ್ಕೂಟ, ಉಡುಪಿ ಜಿಲ್ಲೆ 26. ಅಲ್ಪ ಸಂಖ್ಯಾತರ ವೇದಿಕೆ, ಉಡುಪಿ ಜಿಲ್ಲೆ 27.ವಿಮೆನ್ ಅಂಡ್ ಚಿಲ್ಡ್ರನ್ ವೆಲ್ಫೇರ್ ಎನ್.ಜಿ.ಒ. ಉಡುಪಿ

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಜರಗುವ ಮಹಿಳಾ ಚೈತನ್ಯ ದಿನದ ಕಾರ್ಯಕ್ರಮಗಳ ವಿವರ:

### ಮಾರ್ಚ್ 8, ಶುಕ್ರವಾರ 2024

ಬೆಳಿಗ್ಗೆ ಗಂಟೆ 10.00 ರಿಂದ ಸಂಜೆ ಗಂಟೆ 5.00, ಶ್ರೀ ಆರೂರು ಲಕ್ಷ್ಮೀ ನಾರಾಯಣ ರಾವ್ ಸ್ಮಾರಕ ಪುರಭವನ, ಉಡುಪಿ

'ಮಹಿಳಾ ಪ್ರಾತಿನಿಧ್ಯ - ಆಶಯ ಮತ್ತು ವಾಸ್ತವ' - ವಿಚಾರ ಸಂಕಿರಣ

ದಿಕ್ಸೂಚಿ ಭಾಷಣ : **ಅರುಳ್ ಮೌಳಿ**, ನ್ಯಾಯವಾದಿ, ಹೋರಾಟಗಾರ್ತಿ, ಲೇಖಕಿ - ಚೆನ್ನೈ

5.30ರಿಂದ 6.30 : ಜೋಡುಕಟ್ಟೆಯಿಂದ **'ನಮ್ಮ ಉಡುಪು ನಮ್ಮ ಹಕ್ಕು'** ಘೋಷವಾಕ್ಯ ಹಾಗೂ ಬೆಳಕಿನೊಂದಿಗೆ ಕಪ್ಪು ಉಡುಗೆಯಲ್ಲಿ ಮಹಿಳೆಯರು ಮೌನ ಜಾಗೃತಿ ಕಾರ್ಯಕ್ರಮ.

### ಮಾರ್ಚ್ 9, ಶನಿವಾರ 2024

ಬೆಳಿಗ್ಗೆ ಗಂಟೆ 10.00ಕ್ಕೆ : ಹುತಾತ್ಮ ಚೌಕದಲ್ಲಿ **ಮಹಿಳಾ ಹಕ್ಕೊತ್ತಾಯ ಜಾಥಾ ಉದ್ಘಾಟನೆ**

11.00ಕ್ಕೆ : ಬಿ.ಎಂ.ಎಂ. ಸಭಾಂಗಣ, ಮಿಷನ್ ಕಂಪೌಂಡ್ - **ಮಹಿಳಾ ಸಮಾವೇಶ**

ಮುಖ್ಯ ಅತಿಥಿ : **ಜಿ.ವಿ. ವನ್ನೆಲ ಗದ್ದರ್**, ಸಾಮಾಜಿಕ ಹೋರಾಟಗಾರ್ತಿ, ರಾಜಕಾರಣಿ - ತೆಲಂಗಾಣ

**ಸಬಾ ನಖ್ವಿ** ಖ್ಯಾತ ಪತ್ರಕರ್ತರು, ನವದೆಹಲಿ

ರಾಜ್ಯದಾದ್ಯಂತ ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರ ಮಂಡನೆ.

★ ಜಾಥಾದಲ್ಲಿ ಭಾಗವಹಿಸುವ ಎಲ್ಲಾ ಸಹಭಾಗಿಗಳು ತಂತಮ್ಮ ಬ್ಯಾನರ್ ತಂದುಕೊಳ್ಳಬೇಕು.

**ಮಹಿಳೆಯರೇ, ಮಹಿಳಾ ಪರ ಮನಸುಗಳೇ, ಬನ್ನಿ.**
**ಸಮತೆ ಸಾಮರಸ್ಯದ ನಾಡ ಕಟ್ಟೋಣ.**

**ನಮ್ಮ ಕನಸುಗಳನ್ನು ಸಾಕಾರವಾಗಿಸಲು ಒಗ್ಗೂಡಿ ಹೆಜ್ಜೆಯಿಡೋಣ.**



ಸಂಪರ್ಕ ಸಂಖ್ಯೆ : 9916288902 | 9019004386 | 9900737125 9448643294 | 9845559186 | 9880724485 | 8105758930 | 9964576756 | 9591074175 | 9880853501 9900771106 | 9008858549 | 9008518030 | 9341149480 9480211320 | 9448481340